೧೬) ರಾಜ್ಯದಲ್ಲಿ ತುಳು ಮತ್ತು ಕೊಂಕಣಿ ಭಾಷೆಗಳಿಗೆ ಪ್ರೋತ್ಸಾಹ ಕೊಡುವ ಬಗ್ಗೆ.

ಶ್ರೀ ಪ್ರಭಾಕರ ರಾಣೆ.— ಮಾನ್ಯ ಅಧ್ಯಕ್ಷರೇ ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು 'ಗೋವಾ ಸರಕಾರವು ಕೊಂಕಣಿ ಭಾಷೆಯ ವಿಷಯದಲ್ಲಿ ಗೋವಾದ ಜನರ ಕೈ ಬಿಡ ಬಾರದು' ಎಂಬ ಪತ್ರಿಕಾ ಹೇಳಿಕೆಯನ್ನು ನೋಡಿ ಸಖೇದಾಶ್ಚರ್ಯವಾಗುತ್ತದೆ. ಕರ್ನಾಟಕದಲ್ಲಿ ಲಕ್ಷಾಂತರ ಜನ ಕೊಂಕಣಿ ಮಾತನಾಡುವ ಜನ ವಾಸಿಸುತ್ತಿರುವಾಗ ಕೊಂಕಣಿ ಭಾಷೆಯ ಬೆಳವಣಿಗೆಯ ಬಗೆಗೆ ಕೊಂಕಣಿ ಜನರ ಹಿತ ರಕ್ಷಣೆ ಮಾಡುವ ಕುರಿತು ಚಕಾರ ಶಬ್ದವನ್ನೂ ಹೇಳದೇ ಕರ್ನಾಟಕ ಸರಕಾರ ಯಾವ ಕಾರ್ಯಕ್ರಮಗಳನ್ನೂ ಹಾಕಿಕೊಳ್ಳದೆ ಬೇರೆ ರಾಜ್ಯದ ಆಂತರಿಕ ವಿಷಯದಲ್ಲಿ ಈ ರೀತಿ ಹಸ್ತಕ್ಷೇಪ ಮಾಡಿರುವುದು ಆಕ್ಷೇಪಣೀಯ ಹಾಗೂ ಖಂಡನಾರ್ಹವಾಗಿರುತ್ತದೆ. ಇದು ರಾಜಕೀಯ ದುರುದ್ದೇಶ ದಿಂದ ಕೂಡಿದ್ದು, ಈ ಹೇಳಿಕೆಯು ಕೇವಲ "ಮೊಸಳೆ ಕಣ್ಣೀರು" ಸುರಿದಂತಾಗಿದೆ. ಕರ್ನಾಟಕ ಮಂಹಾರಾಷ್ಟ್ರ ಗಡಿ ವಿಷಯವನ್ನು ಯಾವ ರೀತಿ ತಮ್ಮ ಸ್ವಪ್ರತಿಷ್ಠೆ ಬೆಳೆಸಲು ಮುಖ್ಯ ಮಂತ್ರಿಗಳು ಬಳಸಿಕೊಂಡರೋ ಹಾಗೆಯೇ ಕೊಂಕಣಿ ಭಾಷೆಯ ವಿಷಯವನ್ನೂ ಗೋವೆಯಲ್ಲಿ ಕಾಂಗ್ರೆಸ್ ಪಕ್ಷದ ಸರಕಾರವನ್ನು ಅಸ್ಥಿರಗೊಳಿಸಲು ಮಾಡಿದ ರಾಜಕೀಯ ಪಿತೂರಿ ಎಂದು ಹೇಳದೆ ವಿಧಿ ಇಲ್ಲ. ಮೊದಲು ಕರ್ನಾಟಕದಲ್ಲಿ ಕೊಂಕಣಿ ಮತ್ತು ತುಳು ಭಾಷೆ ಬೆಳವಣಿಗೆಯ ಬಗ್ಗೆ ಹಾಗೂ ಆ ಜನರ ಹಿತ ರಕ್ಷಣೆ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ರಾಜ್ಯ ಸರಕಾರ ಪ್ರವೃತ್ತವಾಗಿ ಈ ಭಾಷೆಗಳ ಬಗ್ಗೆ ಇರುವ ತನ್ನ ನಿಜವಾದ ಕಳಕಳಿಯನ್ನು ತೋರಿಸಿಕೊಡಬೇಕು. ಕರ್ನಾಟಕದಲ್ಲಿಯೇ ನೂರಾರು ಸಮಸ್ಯೆಗಳು ತುಂಬಿರುವಾಗ ಈ ಕಡೆ ಗಮನ ಹರಿಸದೆ ಪರ ರಾಜ್ಯದಲ್ಲಿಯು ಕಸ ರಫಾಡಿಸುವ ಕಾರ್ಯಕ್ಕೆ ಕೈ ಹಾಕದೆ ಕರ್ನಾಟಕದ ಜನರ ಸಮಸ್ಯೆಗಳನ್ನೇ ಮೊದಲು ಪರಿಹರಿಸಲು ನಿಜವಾದ ಕಾಳಜಿಯನ್ನು ವಹಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಡಿ. ವಂಜುನಾಥ್.— ಮಾನ್ಯ ಅಧ್ಯಕ್ಷರೇ, ಕೊಂಕಣಿ ಮತ್ತು ತುಳು ಭಾಷೆಗಳಿಗೆ ಸಾಕಷ್ಟು ಪ್ರಾಶಸ್ತ್ಯ ಕೊಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಹೊರ ನಾಡಿನ ತುಳು ಮಾತನಾಡುವ ಜನರಿಗೂ ಪ್ರೋತ್ಸಾಹವನ್ನು ಕೊಡುತ್ತೇವೆ. ಇದರ ಬಗ್ಗೆ ಉದಾಸೀನ ಮಾಡುತ್ತಿಲ್ಲ. ಮಾನ್ಯ ಸದಸ್ಯರಿಗೂ ಗೊತ್ತಿರುವ ಹಾಗೆ ಮಣಿಪಾಲ್‌ದಲ್ಲಿರುವ ಕಾಲೇಜ್‌ನವರು ಲಿಂಗ್ವಿಸ್ಟಿಕ್ ಬೈನಾರಿಟಿಗೆ ಪ್ರಾಶಸ್ತ್ಯ ಕೊಡಬೇಕೆಂದು ಕೇಳುತ್ತಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿ ಇದೆ.

17) Extension of concessions to minorities run institution

SRI A. M. HINDASGERI (Hubli).— Sir, the Government in their order no. HD 148 SOH 85 (2) dated 4-6-1986 has brought down the grantless period from 7 years to 3 years for granting Grants under the Grant-in-Aid Code in respect of educational institutions run by backward communities. While issuing this order, Government has not considered the educational institutions run by minorities. This has caused resentment among the minorities institutions and grave injustice is done to the minorities run educational institutions while exclusing them from the purview of this Goverment order. Would the Government inform this House whether this benefit and concession would also be extended to minorities run educational institutions.

SRI J. H. PATEL.— I will bring this matter to the notice of the Hon'ble Minister for Lalour for taking suitable action.